ಅರ್ಥೈಸಿಕೊಳ್ಳಬೇಕಾದರೆ ರಾಮಚಂದ್ರ ಗುಹಾ ಅವರ 'ಗಾಂಧಿ ಬಿಫೋರ್ ಇಂಡಿಯಾ' ಪುಸ್ತಕ ಮತ್ತು ಶ್ಯಾಂ ಬೆನೆಗಲ್ ಅವರ 'ಮೇಕಿಂಗ್ ಆಫ್ ದ ಮಹಾತ್ಮಾ' ಚಲನಚಿತ್ರವನ್ನೂ ಉಪಯೋಗಿಸಿಕೊಳ್ಳಬಹುದು. ಅದೇ ಕಾಲದ ಚರಿತ್ರೆಯನ್ನು ಇತಿಹಾಸಕಾರ, ಚಿತ್ರತಯಾರಕರು ಗ್ರಹಿಸುವ ರೀತಿಗೂ ಗಾಂಧಿ ತಮ್ಮನ್ನು ತಾವೇ ನೋಡಿಕೊಂಡ ರೀತಿಗೂ ಇರಬಹುದಾದ ಭಿನ್ನತೆ ನಮಗೆ ಕಾಣುತ್ತದೆ. ಗೋಪಾಲ ಗಾಂಧಿ ಪ್ರಸ್ತುತ ಪಡಿಸಿರುವ ಈ ಪುಸ್ತಕ – ಯಾವುದೇ ಟಿಪ್ಪಣಿಗಳಿಲ್ಲದೇ ಅದೇ ಕಾಲದ ಗಾಂಧಿಯ ದೃಷ್ಟಿಯನ್ನು ತಮ್ಮದೇ ಮಾತುಗಳಲ್ಲಿ ಗ್ರಹಿಸುವ ಅದ್ಭುತ ಯತ್ನವನ್ನು ಮಾಡುತ್ತದೆ.

ಗಾಂಧಿಯವರ ವ್ಯಕ್ತಿತ್ವದ ವಿಕಾಸದಲ್ಲಿ ದಕ್ಷಿಣ ಆಫ್ರಿಕಾ ಮಹತ್ವದ ಪಾತ್ರ ವಹಿಸಿತ್ತೆನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಅದಕ್ಕೂ ಮುನ್ನ ಇಂಗ್ಲೆಂಡಿನಲ್ಲಿ ಅವರ ಓದಿನ ಸಮಯಕ್ಕೆ ಆದ ಅನುಭವಗಳೂ ಈ ಪುಸ್ತಕದಲ್ಲಿ ಗ್ರಹೀತವಾಗಿವೆ. ತಾಯಿಗೆ ಕೊಟ್ಟ ಮಾತಿನಂತೆ ಒಂದೆಡೆ ಸಸ್ಯಾಹಾರವನ್ನು ಪಾಲಿಸುತ್ತಿದ್ದರೆ, ಅದೇ ಸಮಯಕ್ಕೆ ಸಸ್ಯಾಹಾರಿಗಳ ಸಮೂಹವನ್ನೂ ಹುಡುಕಿ ಸಸ್ಯಾಹಾರದ ಮಹತ್ವದ ಬಗ್ಗೆ ವಿಚಾರವಿನಿಮಯವನ್ನೂ ಮಾಡಿಕೊಳ್ಳುತ್ತಾರೆ. ಗಾಂಧಿಯವರಿಗೆ ಯಾವುದೂ ಒಂದು ಚಟುವಟಿಕೆ ಮಾತ್ರವಾಗಿ ಉಳಿಯುವುದಿಲ್ಲ.

ಗುಜರಾತಿ ಮತ್ತು ಇಂಗ್ಲೀಷು ಎರಡೂ ಭಾಷೆಗಳ ಮೇಲೆ ಹಿಡಿತವಿರುವ ವಕೀಲರಾಗಿ ಗಾಂಧಿ, ಭಾರತದಿಂದ ದಕ್ಷಿಣ ಆಫ್ರಿಕಾಕ್ಕೆ ಗುಜರಾತಿ ಭಾರತೀಯರ ಕೇಸುಗಳಿಗೆ ವಕಾಲತ್ತು ಮಾಡಲೆಂದು ಹೊರನಾಡಿಗೆ ಹೋಗುತ್ತಾರೆ. ದಕ್ಷಣ ಆಫ್ರಿಕಾದಲ್ಲಿ ಅವರ ಕಕ್ಷಿಗಳಲ್ಲಿ ಬಹುತೇಕ ಮುಸಲ್ಮಾನರು ಮತ್ತು ತಮಿಳರಿರುತ್ತಾರೆ. ಆದರೆ ಅವರೆಲ್ಲರೂ ಭಾರತ ಸಂಜಾತರು. ಹಿಂದೂ, ಬನಿಯಾ, ಸಸ್ಯಾಹಾರಿ ಎನ್ನುವ ಗುರುತು ಒಂದೆಡೆಯಲ್ಲಿದ್ದರೆ, ಭಾರತದ ಸಂಜಾತ, ಗುಜರಾತಿ ಎನ್ನುವ ಗುರುತು ಮತ್ತೊಂದೆಡೆಯಿದೆ. ಈ ಎರಡೂ ಅಸ್ತಿತ್ವಗಳಲ್ಲಿ ಅಂತರ್ವಿರೋಧ ಇಲ್ಲದಿರುವಂತೆ ಗಾಂಧಿ ವರ್ತಿಸುತ್ತಾರೆ. ಈ ಸಂದರ್ಭದಲ್ಲಿ ಯು.ಆರ್. ಅನಂತಮೂರ್ತಿಯವರು ತಮ್ಮ ಕಾದಂಬರಿ 'ಸಂಸ್ಕಾರ' ಹೇಗೆ ತನ್ನ ಅರ್ಥ ಮತ್ತು ಓದನ್ನು ವಿಸ್ತರಿಸುತ್ತಾ ಹೋಗುತ್ತದೆ ಎಂದು ಒಂದೆಡೆ ಹೇಳಿದ್ದರು. ಅದು ಒಂದು ಗ್ರಾಮದ ಜನರ ಕಥೆಯಾಗಿದ್ದರೂ, ಶಿವಮೊಗ್ಗದ ಮಟ್ಟಕ್ಕೆ ಮಾಧ್ವ ಕುಟುಂಬದ ಕಥೆಯಾಗಿ, ಕರ್ನಾಟಕದ ಮಟ್ಟದಲ್ಲಿ ಬ್ರಾಹ್ಮಣ ಸಮುದಾಯದ ಕಥೆಯಾಗಿ, ರಾಷ್ಟ್ರಮಟ್ಟದಲ್ಲಿ ಹಿಂದೂಗಳ ಕಥೆಯಾಗಿ, ಅಂತರರಾಷ್ಟ್ರೀಯವಾದಾಗ ಭಾರತೀಯರ ಕಥೆಯಾಗುವ ಮಾತನ್ನು ಹೇಳಿದ್ದರು. ಹೀಗೆ ದಕ್ಷಿಣ ಆಫ್ರಿಕಾದ ಗಾಂಧಿಯವರ ಜೀವನ ಮತ್ತು ಚಟುವಟಿಕೆ ಹಲವು ಪದರಗಳ ಕೆಲಸವಾಗಿರುತ್ತದೆ. ಅಲ್ಲಿ ತಮ್ಮ ಸತ್ಯಾಗ್ರಹ ಜೀವನವನ್ನು ಪ್ರಾರಂಭಿಸಿದ ಗಾಂಧಿಗೆ ಆಂದೋಲನ ವಿಸ್ತೃತ ನೆಲೆಯಲ್ಲಿರಬೇಕಾದರೆ ಸರ್ವ ಸಮಾವೇಶಿಯಾಗಿರಬೇಕಾದ ಅನಿವಾರ್ಯತೆಯಿತ್ತು. ಇದರ ಜೊತೆಗೆ ನಿರಂತರವಾಗಿ ತಮ್ಮ ಜನರೊಂದಿಗಲ್ಲದೇ ಆಡಳಿತದಲ್ಲಿ ಕೂತಿರುವ ಆಂಗ್ಲರ ಜೊತೆಗೆ ಮಾತುಕತೆ ಮತ್ತು ಚರ್ಚೆಯಲ್ಲೂ ಇರಬೇಕು. ಇದಕ್ಕೆ ಬೇಕಾದದ್ದು ಬರವಣಿಗೆ. ಮತ್ತು ಆ ಬರವಣಿಗೆಯನ್ನು ಪ್ರಕಟಿಸಲು ಒಂದು ವೇದಿಕೆ. ಹೀಗೆ ಗಾಂಧಿ ಪತ್ರಕರ್ತರಾದರು. ಆದರೆ ಅವರು ಬರೆದದ್ದು ವಾರ್ತೆಗಳನ್ನಲ್ಲ. ಅವರ ಬರವಣಿಗೆ ಎಲ್ಲವೂ ವಿಚಾರಗಳ ಬಗ್ಗೆಯಿತ್ತು.

ಹಕ್ಕುಗಳಿಗಾಗಿ ಹೋರಾಡುವುದರಿಂದ ಅವರ ಸತ್ಯಾಗ್ರಹದ ಜೀವನಕ್ಕೆ ಭದ್ರ ಬುನಾದಿ ಬಿದ್ದದ್ದನ್ನು ಕಾಣಬಹುದು. ಪ್ರತಿಭಟನೆ ಮತ್ತು ಜೈಲುವಾಸ ಎರಡೂ ಅವರ ಚಳವಳಿಯ ಅಭಿನ್ನ ಅಂಗಗಳಾಗಿ ರೂಪುಗೊಳ್ಳುವುದನ್ನು ಕಾಣುತ್ತೇವೆ. ಪ್ರತಿಬಾರಿಯೂ ಜೈಲಿನಿಂದ ಹೊರಬರುವುದು ಹೇಗೆಂದು ಯೋಚಿಸದೇ, ಅತ್ಯಂತ ಹೆಚ್ಚಿನ ಮತ್ತು ಕಠಿಣವಾದ ಜೈಲು ಶಿಕ್ಷೆಯನ್ನು ವಿಧಿಸಬೇಕೆಂದು ಪ್ರಾರ್ಥಿಸುತ್ತಾರೆ. ತಾವು ಮಾಡಲಾಗದ್ದನ್ನು ಇತರರಿಗೆ ಬೋಧಿಸುವುದು ತಪ್ಪೆನ್ನುವ ವಿಚಾರವನ್ನು ಅನೇಕ ಬಾರಿ ಗಾಂಧಿ ಪ್ರಸ್ತಾಪಿಸುತ್ತಾರೆ.

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ತಮ್ಮ ವಕಾಲತ್ತನ್ನು ವ್ಯಾಪಕಗೊಳಿಸಿ ಮಾನವ ಹಕ್ಕುಗಳ ಹೋರಾಟಕ್ಕೆ ವಿಸ್ತಾರಗೊಳ್ಳುವುದನ್ನು ನಾವು ಕಾಣುತ್ತೇವೆ. ಯಾವುದೇ ಚಟುವಟಿಕೆಯ ಹಿನ್ನೆಲೆ, ಅದಕ್ಕಿರಬೇಕಾದ ತರ್ಕ ಮತ್ತು ವಾದಸರಣಿಯನ್ನು ಹುಡುಕುವುದೂ